# ಕರ್ನಾಟಕ ವಿಧಾನ ಪರಿಷತ್ತು .

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 574 |
| ಸದಸ್ಯರ ಹೆಸರು | : | ಶ್ರೀ ಶರಣಪ್ಪ ಮಟ್ಟೂರ (ಶಿಕ್ಷಕರ ಕ್ಷೇತ್ರ) |
| ಉತ್ತರಿಸುವ ದಿನಾಂಕ | : | 13-12-2018 |
| ಉತ್ತರಿಸುವ ಸಚಿವರು | : | ಮುಖ್ಯಮಂತ್ರಿಯವರು. |

| | ಪ್ರಶ್ನೆ | ಉತ್ತರ |
|---|---|---|
| ಅ. | ಪ್ರೌಢಶಾಲಾ ಸಹ ಶಿಕ್ಷಕರುಗಳಿಗೆ ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಹುದ್ದೆಗೆ ಸುಮಾರು 3 ವರ್ಷಗಳಿಂದ ಬಡ್ತಿ ನೀಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ವಿಳಂಬಕ್ಕೆ ಕಾರಣವೇನು; | ಬಂದಿದೆ. |

ಅ) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 71 ಎಸ್.ಆರ್.ಇ 94 ದಿನಾಂಕ:27.05.1998 ರಲ್ಲಿ(ಹಿಂದಿನ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ) ಶೇಕಡ 50 ರಷ್ಟು ಉಪನ್ಯಾಸಕರ ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡಲು ಅವಕಾಶ ಕಲ್ಪಿಸಲಾಗಿದೆ ಮತ್ತು ಶೇಕಡ 50 ರಷ್ಟು ಪ್ರೌಢಶಾಲಾ ಸಹ ಶಿಕ್ಷಕರ ವೃಂದದಿಂದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಉಪನ್ಯಾಸಕರ ವೃಂದಕ್ಕೆ ಬಡ್ತಿ ನೀಡಲು ಅವಕಾಶ ಕಲ್ಪಿಸಲಾಗಿತ್ತು. ಅದರಂತೆ 2012 ರಲ್ಲಿ ಅರ್ಹ 750 ಪ್ರೌಢಶಾಲಾ ಸಹ ಶಿಕ್ಷಕರನ್ನು ಉಪನ್ಯಾಸಕ ವೃಂದಕ್ಕೆ ಬಡ್ತಿ ನೀಡಲಾಗಿದೆ. ವಿವರವನ್ನು ಈ ಕೆಳಕಂಡಂತೆ ನಮೂದಿಸಲಾಗಿದೆ.

| ಮಂಜೂರಾದ ಹುದ್ದೆಗಳು | ನೇರನೇಮಕಾತಿ ಹುದ್ದೆಗಳು | | ಪದೋನ್ನತಿ ಹುದ್ದೆಗಳು | | ನೇರನೇಮಕಾತಿಯಲ್ಲಿ ಹೆಚ್ಚುವರಿ ಹುದ್ದೆ | ಪದೋನ್ನತಿಯಲ್ಲಿ ಹೆಚ್ಚುವರಿ ಹುದ್ದೆಗಳು |
|---|---|---|---|---|---|---|
| | ನೇರನೇಮಕಾತಿಗೆ ಮೀಸಲಾದ ಹುದ್ದೆಗಳು | ಕಾರ್ಯ ನಿರತ ಹುದ್ದೆಗಳು | ಪದೋನ್ನತಿಗೆ ಮೀಸಲಾದ ಹುದ್ದೆಗಳು | ಕಾರ್ಯನಿರತ ಹುದ್ದೆಗಳು | | |
| 12857 | 9642 | 6007 | 3214 | 3609 | -- | 395 |

ಆ) ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 35 ಡಿಜಿಡಿ 2009 ದಿನಾಂಕ:15.05.2014 ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಕ್ಕೆ ಪರಿಷ್ಕರಣೆ ಮಾಡಿ ಶೇಕಡ 75 ರಷ್ಟು ಹುದ್ದೆಗಳನ್ನು ನೇರನೇಮಕಾತಿ ಮೂಲಕ ಭರ್ತಿ ಮಾಡಲು ಮತ್ತು ಶೇಕಡ 25 ರಷ್ಟು ಹುದ್ದೆಗಳನ್ನು ಬಡ್ತಿ ಮೂಲಕ ತುಂಬಲು ಅವಕಾಶ ಕಲ್ಪಿಸಲಾಗಿದೆ.

ಇ) ಬಡ್ತಿ ಕೋಟಾದಲ್ಲಿ ಶೇಕಡ 50ರಷ್ಟು ಪದೋನ್ನತಿ ನೀಡಿದ್ದರಿಂದ ಈಗಾಗಲೇ 395 ಹುದ್ದೆಗಳು ಹೆಚ್ಚುವರಿಯಾಗಿದ್ದು, ಶೇಕಡ 75:25ರ ಬಡ್ತಿ ಕೋಟಾದ ಹುದ್ದೆಗಳು ಲಭ್ಯವಿಲ್ಲದ ಕಾರಣ ಕಳೆದ ಮೂರು ವರ್ಷಗಳಿಂದ ಬಡ್ತಿ ನೀಡಲು ಸಾಧ್ಯವಾಗಿರುವುದಿಲ್ಲ.

| | ಪ್ರಶ್ನೆ | ಉತ್ತರ |
|---|---|---|
| ಆ. | ವೃಂದ ಮತ್ತು ನೇಮಕಾತಿ ನಿಯಮಗಳ ತಿದ್ದುಪಡಿ ಬಗ್ಗೆ ಸರ್ಕಾರ ಚಿಂತನೆ ನಡೆಸಿದೆಯೇ; ಯಾವ ರೀತಿ | |

| | | |
|---|---|---|
| | ಬದಲಾವಣೆ ಮಾಡಲಾಗುತ್ತದೆ; | ದಿನಾಂಕ: 12.06.2018 ರಂದು ನಡೆದ ವೃಂದ ಮತ್ತು ನೇಮಕಾತಿ ಪರಿಶೀಲನಾ ಉಪಸಮಿತಿಯ ಸಭೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯ ಉಪನ್ಯಾಸಕರ ವೃಂದದ ಹುದ್ದೆಯ ನೇರನೇಮಕಾತಿ ಮತ್ತು ಬಡ್ತಿ ಅನುಪಾತವನ್ನು ಚಾಲ್ತಿಯಲ್ಲಿರುವ 75:25 ರಷ್ಟನ್ನು ಮುಂದುವರೆಸಲು ಹಾಗೂ ಬಡ್ತಿಗೆ ಅರ್ಹರಿರುವ ಪ್ರೌಢಶಾಲಾ ಶಿಕ್ಷಕರು ಸ್ನಾತಕೋತ್ತರ ಪದವಿಯಲ್ಲಿ ಕನಿಷ್ಟ ಶೇ. 55ರಷ್ಟು ಅಂಕಗಳನ್ನು ನಿಗಧಿಪಡಿಸಿರುವುದನ್ನು ಶೇಕಡ 50ಕ್ಕೆ ಇಳಿಸಲು ತೀರ್ಮಾನಿಸಲಾಗಿದೆ. |
| ಇ. | ಈ ಹಿಂದಿನ ಮಾನದಂಡದಂತೆ ಶೇಕಡಾ 50:50 ರ ಅನುಪಾತದಲ್ಲಿ ಬಡ್ತಿ ನೀಡಲು ಎಷ್ಟು ಕಾಲಾವಕಾಶ ಬೇಕು; | |
| ಈ. | ಅದರಂತೆ ಹೈದರಾಬಾದ್–ಕರ್ನಾಟಕ ಸ್ಥಳೀಯ ವೃಂದ ಹಾಗೂ ರಾಜ್ಯಮಟ್ಟದ ಸ್ಥಳೀಯ ವೃಂದದಲ್ಲಿ ಪ್ರೌಢಶಾಲಾ ಶಿಕ್ಷಕರ ಹುದ್ದೆಯಿಂದ ಪದವಿ ಪೂರ್ವ ಕಾಲೇಜು ಉಪನ್ಯಾಸಕರ ಹುದ್ದೆಗೆ ಬಡ್ತಿ ನೀಡಲಾಗಿದೆಯೇ;<br><br>ಇಲ್ಲದಿದ್ದಲ್ಲಿ ಸರ್ಕಾರದ ಮುಂದಿನ ನಿಲುವೇನು? (ವಿವರ ನೀಡುವುದು) | ಅ) ನೀಡಲಾಗಿರುವುದಿಲ್ಲ.<br><br>ಆ) ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 43 ಹೆಚ್.ಕೆ.ಸಿ 2013 ದಿನಾಂಕ:29.01.2014 ರಲ್ಲಿ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಬಾದ್–ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳಿಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು 2013 ರ ನಿಯಮಗಳನ್ನು ದಿನಾಂಕ: 07.01.2014 ರಂದು ಪ್ರಕಟಿಸಲಾಗಿದೆ. ಈ ನಿಯಮಗಳು ಜಾರಿಗೆ ಬರುವ ಪೂರ್ವದಲ್ಲಿ ಪ್ರೌಢಶಾಲಾ ಶಿಕ್ಷಕರಿಗೆ ಬಡ್ತಿ ನೀಡಲಾಗಿದ್ದು, ಸದ್ಯದಲ್ಲಿ ಬಡ್ತಿಗೆ ಮೀಸಲಾದ ಹುದ್ದೆಗಳಿಂದ ಹೆಚ್ಚು ಬಡ್ತಿ ಉಪನ್ಯಾಸಕರು ಕಾರ್ಯನಿರ್ವಹಿಸುತ್ತಿರುವುದರಿಂದ ಪ್ರೌಢಶಾಲಾ ಶಿಕ್ಷಕರಿಗೆ ಬಡ್ತಿ ನೀಡಲು ಸಾಧ್ಯವಾಗಿಲ್ಲ. |

**ಸಂಖ್ಯೆ: ಇಡಿ 342 ಡಿಜಿಡಬ್ಲ್ಯೂ 2018**

(ಹೆಚ್.ಡಿ.ಕುಮಾರಸ್ವಾಮಿ)
ಮುಖ್ಯಮಂತ್ರಿ.